ಇನ್ನು ಕೊನೆಯದಾಗಿ ಹೇಳುವುದಾದರೆ ಈಗ ವಯಸ್ಸಾದವರಿಗೆ 30 ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದ ಆರ್ಡರ್ ಇದೆ. ಇದು ಎಲ್ಲ ಜಾತಿಯವರಿಗೂ ಅನ್ವಯವಾಗುತ್ತದೆ. ಆದರೆ ಇದನ್ನು ಪಡೆಯಬೇಕಾದರೆ ಹೆಲ್ತ್ ಸರ್ಟಿಫಿಕೇಟ್ ಮತ್ತು ಫೋಟೋ ಬೇಕು. ಇವುಗಳನ್ನು ಮಾಡಿಸಲು ಹಳ್ಳಿಯ ಜನರು ತಾಲ್ಲೂಕ್ ಕೇಂದ್ರಗಳಿಗೆ ಬಂದು ಹತ್ತು ರೂಪಾಯಿಗಳವರೆಗೆ ಖರ್ಚು ಮಾಡಬೇಕಾಗುತ್ತದೆ. ಅಷ್ಟು ಹಣ ಖರ್ಚು ಮಾಡುವ ಶಕ್ತಿ ಆ ಜನರಿಗೆ ಇರುವುದಿಲ್ಲ. ಅವರು ಸಾಯುವ ಕಾಲಕ್ಕೆ ಸರ್ಕಾರಕ್ಕೆ ಒಳ್ಳೆಯ ಆರಿಕೆ ಮೊದಲು ಸಾಯುವಂತಾಗಲು ಈ ಕೆಲಸವನ್ನು ರೆವಿನ್ಯೂ ಇಲಾಖೆ ಮೂಲಕ ಮಾಡಿಸಿ ಎಲ್ಲರಿಗೂ ಪೆನ್‌ಷನ್ ಸಿಗುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

1-30 P.M.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಳಿಗಿರಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ; ಮೊಟ್ಟಮೊದಲನೆಯದಾಗಿ ದೇಶದಲ್ಲಿ ಹರಿಯುವ ಆಹಾರ ಸಮಸ್ಯೆ ಬಗ್ಗೆ ಒಂದೆರಡು ಮಾತನ್ನು ಹೇಳಲಿಚ್ಛಿಸುತ್ತೇನೆ. ಕಳೆದ ವರ್ಷ ಅಕ್ಕಿ, ಜೋಳ ಮತ್ತು ರಾಗಿ ಬೆಲೆ ಏನು ಇತ್ತು ಮತ್ತು ಈ ವರ್ಷ ಏನು ಇದೆ ಎಂಬುದನ್ನು ನೋಡಿದರೆ, ನಿಜವಾಗಿಯೂ ಬಡ ಜನರು ಜೀವನ ಮಾಡುವುದು ಹೇಗೆ ಎಂಬುದು ನಮಗೂ ಕೂಡ ಯೋಚನೆಯಾಗುತ್ತಾ ಇದೆ. ಆಹಾರ ಸಮಸ್ಯೆ ಈ ಸಾರಿ ಬಹಳ ಇಂಪ್ರೂವ್ ಆಗುತ್ತದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಈ ಆಹಾರ ಸಮಸ್ಯೆಯನ್ನು ಇಂಪ್ರೂವ್ ಮಾಡುವುದಕ್ಕೆ ಏನೇನು ಕೆಲಸಕಾರ್ಯಗಳು ನಡೆದಿವೆ ಎನ್ನುವುದನ್ನು ನೋಡಿದರೆ ಅದು ಜೀರೋ ಎಂದು ನಮ್ಮ ಕಣ್ಣಿಗೆ ಕಾಣಿಸುತ್ತದೆ. ಯಾವುದೇ ನೀರಾವರಿ ಯೋಜನೆಗಳು ಮುಗಿದಿಲ್ಲ; ಇವರಿಂದ ಯಾವುದೇ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ನಮ್ಮ ಜನರಲ್ಲಿ ನೈತಿಕ ಮಟ್ಟ ಬಹಳ ಇಳಿದು ಹೋಗಿದೆ. ಕಲಬೆರಕೆ ಅಸಾಧ್ಯವಾಗಿದೆ. ಆದರೆ, ಸರ್ಕಾರ ಇದ್ಯಾವುದನ್ನೂ ತಡೆಗಟ್ಟುವುದಕ್ಕೆ ವಿಫಲವಾಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅಕ್ಕಿ ಜೋಳ ಇವೆಕ್ಕೆಲ್ಲಾ ಒಳ್ಳೆಯದು—ಕೆಟ್ಟದೆಲ್ಲವನ್ನೂ ಮಿಕ್ಸ್ ಮಾಡಿ ಹೈರೇಟ್‌ನಲ್ಲಿ ಮಾರಾಟಮಾಡುತ್ತಾರೆ. ಆದರೆ ಸರಕಾರ ನಮ್ಮನ್ನೆ ಕಣ್ಣುಮುಚ್ಚಿಕೊಂಡಿದೆ. ಹಣ ಹೆಚ್ಚಿಗೆ ಕೊಟ್ಟರೆ ಆಹಾರ ಸಿಕ್ಕುತ್ತದೆ, ಇಲ್ಲದಿದ್ದರೆ ಇಲ್ಲ. ಇದರ ಬಗ್ಗೆ ಸರಕಾರ ಕಣ್ಣು ಬಿಟ್ಟು ನೋಡಿದೆ ಏನಾದುದ್ದು ಜಾಸ್ತಿ ಕೊಟ್ಟರೆ, ಉತ್ಪತ್ತಿಯಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲವೇನು ? ಉತ್ಪತ್ತಿಯಾದುದೆಲ್ಲಾ ಎಲ್ಲಿ ಹೋಗುತ್ತಾ ಇದೆ ? ಇದನ್ನು ಸರಕಾರ ಇವತ್ತಿನ ದಿವಸ ವಿಮರ್ಶೆ ಮಾಡದೆ, ಇದರಿಂದ ಬಡ ಜನಗಳು ಜೀವನ ಮಾಡುವುದು ಬಹಳ ಕಷ್ಟವಾಗಿದೆ; ಆಹಾರಧಾನ್ಯಗಳ ವಿತರಣೆ ಗೊಂದಲ ಮಯವಾಗಿದೆ. ಇನ್ನು ಹಳ್ಳಿಗಳ ವಿಚಾರ. ನೂರಾರು ಎರಡು ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗಳಿಗೆ ಕೇವಲ 2 ಮೂಟೆ ಅಕ್ಕಿ, ಒಂದು ಮೂಟೆ ಸಕ್ಕರೆ ಕಳುಹಿಸುತ್ತಾರೆ. ಇದರಿಂದ ಹಳ್ಳಿಗಳಲ್ಲಿ ಕಾಳಸಂತೆ ಪ್ರಾರಂಭವಾಗುತ್ತದೆ ಎಂದು ಕೆಲವರು ಇದನ್ನು ತೆಗೆದುಕೊಂಡು ಹೋಗುವುದೇ ಇಲ್ಲ. ಹೀಗೆ ಆಹಾರಪದಾರ್ಥಗಳು ಹಳ್ಳಿಗಳಿಗೇ ತಲುಪುತ್ತಲೇ ಇಲ್ಲ.

ಅಧ್ಯಕ್ಷರು.—ತಾವು ಸೋಮವಾರ ತಮ್ಮ ಭಾಷಣವನ್ನು ಮುಂದುವರಿಸಬಹುದು.

Election of Members to the Senate of Bangalore University—Resutls (Announced)

MADAM SPEAKER.—In connection with the election to the Senate of the Bangalore University as the number of nominations is equal to the number of members to be elected, the following members are declared elected and there will be no election in this behalf :

Sriyuths :

1. Andanaiah
2. Bettaswamy Gowda

Sriyuths :

3. U. T. Fareed
4. V. Masiyappa
5. T. R. Shamanna
6. B. Shivanna

The House now stands adjourned to meet again on Monday, at 1-00 P.M.

The House adjourned at Thirty Five Minutes past One of the Clock to meet again at One of the Clock on Monday, the 17th February, 1975.